ಇಬ್ಬರೂ ಮೈಸೂರಿಗೆ ಬಂದವರೇ ರಂಗಭೂಮಿ ಪ್ರವೇಶ ಮಾಡಿದರು. ಪಿಟೀಲು ಟಿ. ಚೌಡಯ್ಯನವರೊಂದಿಗೆ ಹಿರಣ್ಣಯ್ಯನವರು ತಯಾರಿಸಿದ 'ವಾಣಿ' ಚಿತ್ರದಲ್ಲಿ ಅಭಿನಯಿಸಿದ್ದನ್ನು ಬಿಟ್ಟರೆ ಲಲಿತಾ ಅವರು ಹೆಚ್ಚಿನ ಪ್ರಸಿದ್ಧಿ ಪಡೆದಿದ್ದು ರಂಗಭೂಮಿಯಲ್ಲಿಯೇ.

ಹಿರಣ್ಣಯ್ಯನವರು ಸ್ಥಾಪಿಸಿದ 'ಕೆ. ಹಿರಣ್ಣಯ್ಯ ಮಿತ್ರ ಮಂಡಲಿ'ಯಲ್ಲಿ ಕಾಯಮ್ಮಾಗಿ ನೆಲೆನಿಂತ ಲಲಿತಾ ಅವರು ಕಲಾಭಿಮಾನಿಗಳ ಗಮನ ಸೆಳೆಯಲು ಹೆಚ್ಚು ಕಾಲ ಹಿಡಿಯಲಿಲ್ಲ. ಹೊಸ ಪ್ರಯೋಗಗಳಿಗೆ ಹೆಚ್ಚಿನ ಒತ್ತುಕೊಡುತ್ತಿದ್ದ ಹಿರಣ್ಣಯ್ಯನವರ ಪ್ರದರ್ಶಿಸಿದ 'ಸದಾರಮೆ' ನಾಟಕದಿಂದ ದಿನ ಬೆಳಗಾಗುವುದರೊಳಗೆ ಖ್ಯಾತಿ ಗಳಿಸಿದರು ಬಳ್ಳಾರಿ ಲಲಿತಾ.

ಸಾಮಾಜಿಕ ನಾಟಕಗಳಿಂದ ನೋಡುಗರಿಗೆ ಹೊಸ ಅನುಭವ ನೀಡುತ್ತಿದ್ದ ಹಿರಣ್ಣಯ್ಯನವರು ರಂಗಭೂಮಿಗಿತ್ತ 'ದೇವದಾಸಿ' ನಾಟಕದಲ್ಲಿ 'ಮಣಿಮಂಜರಿ' ಪಾತ್ರದಿಂದ ಪ್ರೇಕ್ಷಕರ ಮನದಾಳದಲ್ಲಿ ಲಲಿತಾ ಮನೆ ಮಾಡಿದರು. ಮಣಿಮಂಜರಿಯಾಗಿ ಪಾತ್ರ ಪ್ರವೇಶಮಾಡಿದ ಅವರ ಅಭಿನಯ ಚಮತ್ಕಾರ ಬಹುಕಾಲ ಉಳಿಯುವಂತೆ ಮಾಡಿತಲ್ಲದೆ ಅವರ ಬಹುಮುಖ ಪ್ರತಿಭೆಗೆ ನಿದರ್ಶನವಾಯಿತು.

ಯಾವ ಪಾತ್ರಕ್ಕಾದರೂ ಜೀವ ತುಂಬುವುದು ಲಲಿತಾ ಅವರಿಗೆ ಕರಗತವಾಗಿತ್ತು. ಅವು ಪೌರಾಣಿಕ, ಚಾರಿತ್ರಿಕ ಹಾಗೂ ಸಾಮಾಜಿಕ – ಹೀಗೆ ಯಾವುದೇ ಪ್ರಕಾರದ ನಾಟಕಗಳಾದರೂ ಅವರು ನಟಿಸಿದ ಪಾತ್ರಗಳಲ್ಲಿ ಅವರದೇ ಛಾಪು ಇರುತ್ತಿತ್ತು. 'ಸಂಸಾರ ನೌಕ', 'ಮಕ್ಮಲ್ ಟೋಪಿ', 'ಎಚ್ಚಮನಾಯಕ', 'ಟಿಪ್ಪೂಸುಲ್ತಾನ್', 'ರಾಮಾಯಣ', 'ಕಾಳಿದಾಸ' ಈ ಎಲ್ಲಾ ನಾಟಕಗಳಲ್ಲೂ ಪ್ರಧಾನ ಪಾತ್ರಧಾರಿಯಾಗಿ ಮಿಂಚುದ್ದು ಅವರ ಹೆಗ್ಗಳಿಕೆ.

ಸೀತೆ, ಮಂಡೋದರಿ, ಮೋಹಿನಿ, ಪಂಕಜಾಕ್ಷಿ... ಹೀಗೆ ಹತ್ತಾರು ಪ್ರಮುಖ ಪಾತ್ರಗಳನ್ನು ಅಭಿನಯಿಸಿದ ಲಲಿತಾ ಅವರು ಚಿರಸ್ಥಾಯಿಯಾಗಿ ನಿಂತಿದ್ದು 'ಸದಾರಮೆ' ಹಾಗೂ 'ಮಣಿಮಂಜರಿ' ಪಾತ್ರಗಳ ಮೂಲಕ. ಅಮೋಘ ಅಭಿನಯ, ಮೊನಚಾದ ಮಾತು, ಒನಪು ಒಯ್ಯಾರ, ನೇರ ನಿರೂಪಣೆಗಳಿಂದ ಪ್ರೇಕ್ಷಕರಲ್ಲಿ ಅಚ್ಚಳಿಯದೆ ನಿಲ್ಲುತ್ತಿದ್ದ ಈ ನಟಿ ಅಪ್ರತಿಮ ಸುಂದರಿ. ಅವರ ಸೌಂದರ್ಯ ಅವರ ಪ್ರತಿಭೆಗೆ ಪುಟಕೊಟ್ಟಿತ್ತು.

ಬೇರೆ ಕಲಾವಿದರಂತೆ ಅವರು ಕಂಪೆನಿಗಳನ್ನು ಬದಲಿಸಲಿಲ್ಲ. ಕೆ. ಹಿರಣ್ಣಯ್ಯನವರ ಕಂಪೆನಿಗೆ ಸೇರಿದ ಮೇಲೆ ಅವರು ವಿಧಿವಶರಾಗುವವರೆಗೂ ಅಲ್ಲೇ ನಿಂತರು. ನಂತರ ಅಣ್ಣ ವೆಂಕಟಪ್ಪನವರೊಂದಿಗೆ ಸ್ವಂತ ಕಂಪೆನಿ ಮಾಡಿ ಕೆಲ ಕಾಲ ನಡೆಸಿದರು. ಮಾಸ್ಟರ್ ಹಿರಣ್ಣಯ್ಯ ಅವರ ಕಂಪೆನಿಯಲ್ಲೂ ಕೆಲ ಕಾಲವಿದ್ದರು. ಬಳಿಕ ಅವರು ರಂಗಕ್ಕೆ ಕಾಲಿಡಲೇ ಇಲ್ಲ.

ರಂಗಭೂಮಿ – ಚಲನಚಿತ್ರರಂಗದಿಂದ ಕರೆ ಬಂದರೂ ಬಳ್ಳಾರಿಯಲ್ಲೇ ಇದ್ದುಬಿಟ್ಟರು ಲಲಿತಮ್ಮ. ಸರಿಸುಮಾರು ಎರಡು ದಶಕಗಳ ಕಾಲ ಬಣ್ಣದ ಬದುಕಿನಲ್ಲಿ ವಿಜೃಂಭಿಸಿದ ಲಲಿತಾ ಮುಂದಿನ ಮೂರು – ನಾಲ್ಕು ದಶಕಗಳ ಕಾಲ ರಂಗಭೂಮಿಯಲ್ಲಿ ಕಾಣಿಸಿಕೊಳ್ಳಲಿಲ್ಲ.

ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ಹಲವು ಗೌರವ ಪುರಸ್ಕಾರಗಳು ಬಳ್ಳಾರಿ ಲಲಿತಮ್ಮನವರನ್ನು ಹುಡುಕಿ ಬಂದವು. ಮೊದಲಿಗೆ ಚಿತ್ರನಟಿಯಾಗಿ ಬಣ್ಣ ಹಚ್ಚಿಕೊಂಡರೂ ಅವರ ಅಭಿನಯ ಸಾಮರ್ಥ್ಯ ಅನಾವರಣಗೊಂಡಿದ್ದು ರಂಗಭೂಮಿಯಲ್ಲಿ.

*